<u>ದಿನಾಂಕ : *31-01-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಎದುರುದಾರರ ಪರವಾಗಿ ಶ್ರೀ. ಆರ್. ಬಿ. ಬಿ ವಕೀಲರಿಂದ:</u>

ನಾನು ಮೂಲತಃ ಯಲಬುರ್ಗಾ ತಾಲೂಕಿನ ಹುಣಶ್ಯಾಳ ಗ್ರಾಮದಲ್ಲಿ ವಾಸ ಮಾಡುತ್ತೇನೆ. ನಾನು ಕಳೆದ 13 ವರ್ಷಗಳಿಂದ ಹುಣಶ್ಯಾಳ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ಗಂಡನ ಪೂರ್ಣ ಹೆಸರು ದೇವಪ್ಪ ಮಾಳಿ. ನಮ್ಮ ಕುಟುಂಬದಲ್ಲಿ ನಾವು ಒಟ್ಟು 10 ಜನ ವಾಸ ಮಾಡುತ್ತಿದ್ದೇವೆ. ನನ್ನ ಗಂಡ ಚಾಲಕನಾಗಿ ಕೆಲಸ ಮಾಡುತ್ತಿದ್ದನು. ನನ್ನ ಗಂಡ ಟ್ರ್ಯಾಕ್ಟರ್ ಚಾಲಕನಾಗಿ ಕೆಲಸವನ್ನು ಮಾಡುತ್ತಿದ್ದರು. ನಾನು ಕಬ್ಬು ಕಡೆಯುವ ಕೆಲಸವನ್ನು ಮಾಡುತ್ತಿದ್ದೆನು. 4 ಮತ್ತು 5 ನೇ ಅರ್ಜಿದಾರರು ಯಾವುದೇ ಕೆಲಸವನ್ನು ಮಾಡುವುದಿಲ್ಲ ಮತ್ತು ಅವರು ಮನೆಯಲ್ಲಿ ಇರುತ್ತಾರೆ. ನನ್ನ ಗಂಡ ಕಂದಗಲ್ಲ ಗ್ರಾಮದಲ್ಲಿ ಟ್ರ್ಯಾಕ್ಟರ್ ಚಾಲಕನಾಗಿ ಕೆಲಸ ಮಾಡುತ್ತಿದ್ದನು. ನನ್ನ ಗಂಡ ಎದುರುದಾರರ ಹತ್ತಿರ ಟ್ರ್ಯಾಕ್ಟರ್ ಚಾಲಕನಾಗಿ ಕೆಲಸ ಮಾಡುತ್ತಿದ್ದನು. ನನ್ನ ಗಂಡ ಅವರ ಹೊಲಕ್ಕೆ ಹೋದಾಗಿನಿಂದ 15 ದಿನಗಳ ಕಾಲ ಟ್ರ್ಯಾಕ್ಟರ್ ಚಾಲಕನಾಗಿ ಕೆಲಸ ಮಾಡಿರುತ್ತಾನೆ. ನನ್ನ ಗಂಡ ತೀರಿಕೊಂಡ ಕಾರಣಕ್ಕಾಗಿ ಪರಿಹಾರಧನದ ಸಲುವಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನನ್ನ ಅರ್ಜಿಯನ್ನು ಸಲ್ಲಿಸಲು ಮಾಹಿತಿಯನ್ನು ನಾನು ನೀಡಿರುತ್ತೇನೆ. ನಾನು ಅರ್ಜಿಯಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಅರ್ಜಿಯಲ್ಲಿ ನನ್ನ ಗಂಡ ಕೇವಲ 15 ದಿನಗಳ ಕಾಲ ಎದುರುದಾರರ ಹತ್ತಿರ ಕೆಲಸವನ್ನು ಮಾಡಿರುತ್ತಾನೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಘಟನೆ ನಡೆದು ಮೂರು ವರ್ಷಗಳಾಯಿತು. ಈ ಘಟನೆ ನಡೆದಾಗ ನಾನು ಅದೇ ತೋಟದಲ್ಲಿದ್ದೆ. ನಾನು ಕಬ್ಬು ಕಡಿಯುವದಕ್ಕಾಗಿ ಹುಣಶ್ಯಾಳ ಗ್ರಾಮದಿಂದ ತೋಟಕ್ಕೆ ಬಂದಿದ್ದೆ. ನಮ್ಮ ಊರಿನಿಂದ 20 ಜನರು ಕಬ್ಬು ಕಡಿಯುವುದಕ್ಕಾಗಿ ಬಂದಿದ್ದೆವು. ಆ 20 ಜನರಲ್ಲಿ ನನ್ನ ಗಂಡ ಕೂಡಾ ಒಬ್ಬ. ನಮ್ಮ ಊರಿನ 20 ಜನರು ಕಬ್ಬು ಕಡೆಯುವುದಕ್ಕಾಗಿ ಗುಂಪು ಗುಂಪಾಗಿ ಬೇರೆ ಬೇರೆ ಊರುಗಳಿಗೆ ಹೋಗುತ್ತೇವೆ ಎಂದರೆ ಸರಿ. ನಾನು ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ತಿಳಿದಿರುತ್ತದೆ. ನನ್ನ ಗಂಡ ಘಟನೆಯಲ್ಲಿ ತೀರಿಕೊಂಡಿದ್ದರ ಕುರಿತು ಮಂಜುನಾಥ ಎನ್ನುವವರು ಪೋಲಿಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ. ಮಂಜುನಾಥ ರವರು ನನ್ನ ಸೋದರ ಮಾವ. ಮಂಜುನಾಥರವರು ಏನು ದೂರು ಸಲ್ಲಿಸಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ.

ಮಂಜುನಾಥ ರವರು ಸಲ್ಲಿಸಿದ ದೂರನ್ನು ನಾನು ಓದಿರುತ್ತೇನೆ. ಸಾಕ್ಷಿದಾರರಿಗೆ ನಿಪಿ-2 ನ್ನು ತೋರಿಸಿದಾಗ ಅದನ್ನು ನೋಡಿ ಮಂಜುನಾಥ ರವರು ನೀಡಿದ ದೂರು ಇದೇ ಎಂದು ಹೇಳುತ್ತಾರೆ. ಇಲಕಲ್ಲ ಪೋಲಿಸ್ ಠಾಣೆಯವರು ಸಲ್ಲಿಸಿದ ಪ್ರಥಮ ವರ್ತಮಾನ ವರದಿಯನ್ನು ನಾನು ನೋಡಿರುತ್ತೇನೆ ಮತ್ತು ಸಾಕ್ಷಿದಾರರಿಗೆ ತೋರಿಸಿದಾಗ ಅದು ಇದೇ ಎಂದು ಹೇಳುತ್ತಾರೆ. ನಿಪಿ-1 ಮತ್ತು ನಿಪಿ-2 ರಲ್ಲಿರುವ ಅಂಶಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಮಾನ್ಯ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.